

ಬೆಂಗಳೂರಿನ ಜೆ.ಪಿ. ನಗರದಲ್ಲಿ 'ಪ್ಲಾಟಿನಂ ಪಾವ್ ಪ್ಯಾರಡೈಸ್' ನಾಯಿಗಳ ಬೋರ್ಡಿಂಗ್ ನಡೆಸುತ್ತಿರುವ ಪ್ರವೀಣ್



ಆಹಾ! ಈಜಿನ ಮೋಜೇ...

## ನಾಯಿಗೂ ಇದೆ ಇತಿಹಾಸ

ಪುರಾಣ, ಇತಿಹಾಸಗಳಲ್ಲಿ ನಾಯಿಗಳಿಗೆ ಮಹತ್ವದ ಸ್ಥಾನವಿದೆ ಎಂಬುದನ್ನು ಓದಿ, ಕೇಳಿ ತಿಳಿದಿರಬಹುದು. ಕೆಲವು ಉಲ್ಲೇಖಗಳು ಹೀಗಿವೆ:

- ಧರ್ಮರಾಯನು ಸ್ವರ್ಗಕ್ಕೆ ಹೋಗುವಾಗ ಕೊನೆಯವರೆಗೂ ಅವನನ್ನು ಹಿಂಬಾಲಿಸಿದ್ದು ಒಂದು ನಾಯಿ!
- ಈಜಿಪ್ತಿನ ಪುರಾಣಗಳಲ್ಲಿನ ಅನೂಬಿಸ್ ಎಂಬ ಸಮಾಧಿ ರಕ್ಷಕ ದೇವತೆ ನಾಯಿ ಆಕಾರದಲ್ಲಿದೆ.
- ಎರಡನೇ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಸೇನೆಯು ಸುಮಾರು ಎರಡು ಲಕ್ಷದ ಐವತ್ತು ಸಾವಿರ ನಾಯಿಗಳನ್ನು ಯುದ್ಧಕಾರ್ಯಕ್ಕಾಗಿ ಬಳಸಿಕೊಂಡಿತ್ತು.
- ಛತ್ರಪತಿ ಸಾಹು ಮಹಾರಾಜರ ನಾಯಿ 'ಕಂಡ್ಯಾ' ಅವರನ್ನು ಬೇಟೆಯಲ್ಲಿ ಹುಲಿಯ ಆಕ್ರಮಣದಿಂದ ರಕ್ಷಿಸಿತ್ತು. ತನ್ನ ಒಡೆಯ ಸತ್ತಾಗ ತಾನೂ ಚಿತೆಗೆ ಹಾರಿ ಪ್ರಾಣ ಬಿಟ್ಟಿತ್ತು.
- ಸರಮ, ಶ್ಯಾಮ ಹಾಗೂ ಶಬಲ – ಇವು ದೇವತೆಗಳಿಗೆ ಇಷ್ಟವಾದ ನಾಯಿಗಳಂತೆ.
- ಆಗಸ್ಟ್ 26 ವಿಶ್ವ ಶ್ವಾನ ದಿನ. 2004ರಲ್ಲಿ ಕಾಲಿನ್ ಪೈಗೆ ಎನ್ನುವವರು 'ವಿಶ್ವ ಶ್ವಾನ ದಿನ'ವನ್ನು ಆರಂಭಿಸಿದರು. ಪ್ರಾಣಿಗಳನ್ನು ರಕ್ಷಿಸುವ ಅಡ್ವೊಕೇಟ್ ಆಗಿರುವ ಅವರು, ಬೀದಿ ನಾಯಿಗಳ ರಕ್ಷಣೆಯ ಉದ್ದೇಶದಿಂದ ಈ ದಿನವನ್ನು ಆಚರಿಸಿದರು. ಬೀದಿ ನಾಯಿಗಳನ್ನು ದತ್ತು ಪಡೆಯುವುದನ್ನೂ ಪ್ರೋತ್ಸಾಹ ನೀಡುವುದು ಅವರ ಉದ್ದೇಶವಾಗಿತ್ತು.

'ಬೋರ್ಡಿಂಗ್‌ನಲ್ಲಿ ಬಿಡುವ ನಾಯಿಗಳಿಗೆ ಚಿಕನ್‌ಸೂಪ್, ಬೇಯಿಸಿದ ಮೊಟ್ಟೆ, ಮೊಸರನ್ನ, ಸಿಹಿಗುಂಬಳಕಾಯಿ, ಆಲೂಗಡ್ಡೆ ಮುಂತಾದ ಆಹಾರವನ್ನು ದಿನಕ್ಕೆರಡು ಬಾರಿ ಕೊಡುತ್ತೇವೆ' ಎನ್ನುವ ಪ್ರವೀಣ್, 'ನಾಯಿಗಳನ್ನು ಬಿಡಬೇಕಾದರೆ ವ್ಯಾಕ್ಸಿನೇಷನ್ ಕಡ್ಡಾಯವಾಗಿ ಆಗಿರಬೇಕು, ನಾಯಿ ಫ್ರೆಂಡ್ಲಿ ಆಗಿರಬೇಕು ಎಂಬ ನಿಯಮವಿದೆ' ಎಂದೂ ಹೇಳುತ್ತಾರೆ.

'ಕೆಲವರು ಆರು ತಿಂಗಳು, ಒಂದು ವರ್ಷದವರೆಗೂ ತಮ್ಮ ನಾಯಿಗಳನ್ನು ಇಲ್ಲಿ ಬಿಟ್ಟು ಹೋಗಿರುವುದಿದೆ. ವಿದೇಶಕ್ಕೆ ಹೋಗುವವರು ದೀರ್ಘ ಅವಧಿಯವರೆಗೆ ಹಾಸ್ಟೆಲ್‌ನಲ್ಲಿ ಬಿಡುತ್ತಾರೆ. ಇನ್ನೂ ಕೆಲವರು 'ಪ್ರಾಜೆಕ್ಟ್ ವರ್ಕ್ ಮೇಲೆ ದೆಹಲಿಗೆ ಹೋಗಬೇಕಾಗಿದೆ, ಎರಡು ವಾರ ನೋಡಿಕೊಳ್ಳಿ' ಎಂದು ಬಿಟ್ಟು ಹೋಗುತ್ತಾರೆ. ಕೆಲವರಿಗೆ ಮನೆಯಲ್ಲಿ ಅನಾರೋಗ್ಯ ಇದ್ದಾಗ ನಾಯಿಯನ್ನು ನೋಡಿಕೊಳ್ಳಲು ಆಗದು. ಇಂಥ ಸಮಯದಲ್ಲಿ ಬೋರ್ಡಿಂಗ್ ಬೇಕು ಎಂದು ಬರುತ್ತಾರೆ. ಊರಿನಿಂದ ತಂದೆ ತಾಯಿ ಬರ್ತಾ ಇದ್ದಾರೆ. ಅವರಿಗೆ ಮನೆಯಲ್ಲಿ ನಾಯಿ ಇರೋದು ಇಷ್ಟ ಆಗಲ್ಲ. ಅವರು ಹೋಗೋವರೆಗೂ ನೋಡಿಕೊಳ್ಳಿ ಎಂದೂ ಬರುವವರು ಇದ್ದಾರೆ' ಎಂದು ನಾಯಿ ಬಿಡಲು ಕಾರಣಗಳನ್ನು ವಿವರಿಸುತ್ತಾರೆ ಅವರು.

ದಿನವೊಂದಕ್ಕೆ 600 ರೂಪಾಯಿ ಶುಲ್ಕ ವಿಧಿಸುವ ಇವರು, ಮನೆಯಲ್ಲಿ ಕೇಜ್ ಎಂದೇನೂ ಮಾಡಿಲ್ಲ. ಹಾಲ್‌ನಲ್ಲಿ ಎಲ್ಲ ತಳಿಯ ನಾಯಿಗಳನ್ನೂ ಒಟ್ಟಿಗೆ ಬಿಟ್ಟು ನೋಡಿಕೊಳ್ಳುತ್ತಾರೆ.

ಪ್ರವೀಣ್ ಸಂಪರ್ಕ: 9448200842

### ನೆಮ್ಮದಿಯ ತಂಗುದಾಣ

ಬೋರ್ಡಿಂಗ್ ಸೆಂಟರ್‌ಗಳ ಕಾರ್ಯಾಚರಣೆಯಿಂದಾಗಿ ನಾಯಿ ಸಾಕುವವರ ಸಮಸ್ಯೆಗಳಿಗೆ ತಕ್ಕಮಟ್ಟಿಗಿನ ಪರಿಹಾರ ದೊರಕಿದೆ. ಮನೆಯಿಂದ ಹೊರಗೆ ಹೋಗುವಾಗ ನಾಯಿಯನ್ನು ನೋಡಿಕೊಳ್ಳಲು ಯಾರನ್ನಾದರೂ ಹೊಂಚಬೇಕಾಗಿದ್ದ ಸಮಸ್ಯೆ ಈಗಿಲ್ಲ. ಅದೇರೀತಿ, ನೋಡಿಕೊಳ್ಳುವವರು ನಮ್ಮ ನಾಯಿಯನ್ನು ಹೇಗೆ ನೋಡಿಕೊಳ್ಳುತ್ತಾರೋ ಎನ್ನುವ ಅನುಮಾನಕ್ಕೂ ಆಸ್ಪದವಿಲ್ಲ. ವೃತ್ತಿಪರರೇ ನಾಯಿಗಳ ಕಾಳಜಿ ವಹಿಸುವುದರಿಂದ, ಬೋರ್ಡಿಂಗ್ ಸೆಂಟರ್‌ಗಳಲ್ಲಿ ಸಾಕುಪ್ರಾಣಿಗಳನ್ನು ಆರಾಮಾಗಿ ಬಿಟ್ಟು ಹೋಗಬಹುದು. ಅದರಿಂದಾಗಿ ನಾಯಿಗಳು ಕ್ಷೇಮವಾಗಿರುತ್ತವೆ, ಅವುಗಳ ಕಾಳಜಿಯ ಕುರಿತ ಆತಂಕ ಬಿಟ್ಟು ಮಾಲೀಕರು ಕೂಡ ತಮ್ಮ ಕೆಲಸಕಾರ್ಯಗಳಲ್ಲಿ ನಿರಾತಂಕವಾಗಿ ತೊಡಗಿಕೊಳ್ಳಬಹುದು.

ವೃದ್ಧಾಶ್ರಮಗಳು ಆರಂಭವಾದಾಗ ಅವುಗಳನ್ನು ಬೆರಗು ಹಾಗೂ ವಿಷಾದದಿಂದ ನೋಡುವವರಿದ್ದರು. ಉದ್ಯೋಗಕ್ಕೆ ಹೋಗುವ ಪಾಲಕರ ಮಕ್ಕಳನ್ನು ನೋಡಿಕೊಳ್ಳಲು ಆರಂಭವಾದ 'ಡೇ ಕೇರ್ ಸೆಂಟರ್'ಗಳ ಬಗ್ಗೆಯೂ ಅನುಕಂಪದಿಂದ ಮಾತನಾಡುವವರು ಇದ್ದಾರೆ. ಈ ಆಧುನಿಕ ಜಗತ್ತಿನ ಹೊಸ ಚಲನೆಯ ರೂಪದಲ್ಲಿ ನಾಯಿಗಳ ಬೋರ್ಡಿಂಗ್‌ಗಳನ್ನು ನೋಡಬೇಕು.

ಪ್ರತಿಕ್ರಿಯಿಸಿ: feedback@sudha.co.in